## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1034 |
| ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ |
| ಉತ್ತರಿಸುವ ದಿನಾಂಕ | : | 21-09-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ನಗರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ವೃಂದವಾರು ಹುದ್ದೆಗಳೆಷ್ಟು; (ಸ್ಪಷ್ಟ ಮಾಹಿತಿ ನೀಡುವುದು) | ಬೀದರ್ ನಗರಸಭೆ ಮತ್ತು ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು 536 ಹುದ್ದೆಗಳು ಖಾಲಿ ಇರುತ್ತದೆ. ವಿವರ ಅನುಬಂಧದಲ್ಲಿ ಲಗತ್ತಿಸಿದೆ. |
| ಆ. | ಬೀದರ್ ನಗರಸಭೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದಿರಲು ಕಾರಣಗಳೇನು; ಎಷ್ಟು ಕಾಲಮಿತಿಯೊಳಗೆ ವಿವಿಧ ವೃಂದದ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುವುದು; (ಸ್ಪಷ್ಟ ಮಾಹಿತಿ ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗದಿಂದ ಗ್ರೂಪ್ ಬಿ ಮತ್ತು ಗ್ರೂಪ್ ಸಿ ವೃಂದದ (ಹೈದ್ರಾಬಾದ್ ಕರ್ನಾಟಕ ಪ್ರದೇಶದ ಒಳಗೊಂಡು) 1104 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತವಾಗಿದ್ದು, ಅದರಲ್ಲಿ ಒಟ್ಟು 763 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿ, 721 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಪ್ರಸ್ತುತ ನಿರ್ದೇಶನಾಲಯದಲ್ಲಿ ವಿವಿಧ ವೃಂದದ ಒಟ್ಟು 69 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಉಳಿದಂತೆ 519 ಹುದ್ದೆಗಳ ಆಯ್ಕೆಪಟ್ಟಿ ಕರ್ನಾಟಕ ಲೋಕಸೇವಾ ಆಯೋಗದಿಂದ ಸ್ವೀಕೃತವಾಗಬೇಕಿರುತ್ತದೆ. ಉಳಿದಂತೆ ನೇರನೇಮಕಾತಿಯಡಿ ಖಾಲಿ ಇರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಮೂಲ ವೃಂದದ 293 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಜಿಲ್ಲಾ ಮಟ್ಟದಲ್ಲಿ ಮುಂಬಡ್ತಿ ಖೋಟಾದಡಿಯಲ್ಲಿ ವಿವಿಧ "ಸಿ" ವೃಂದದ ಖಾಲಿ ಹುದ್ದೆಗೆ ಮುಂಬಡ್ತಿಗೆ ಸಂಬಂಧಿಸಿದಂತೆ ನಿರ್ದೇಶನಾಲಯದ ಪತ್ರ ಸಂಖ್ಯೆ:ಇ-243772 ಡಿಎಂಎ/ಇಎಸ್‌ಟಿ2/ಎಸ್‌ಡಿಎ/3/2020 ದಿನಾಂಕ: 05.08.2020 ಹಾಗೂ ದಿನಾಂಕ: 22.01.2021 ರಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |

. . . 2 .

| | | |
|---|---|---|
| ಇ | ಬೀದರ್ ನಗರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳು ಇರುವುದರಿಂದ ಕೆಲಸ ಕಾರ್ಯಗಳಿಂದ ಸಾರ್ವಜನಿಕರಿಗೂ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | ಬೀದರ್ ನಗರಸಭೆ ಮತ್ತು ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ 296 ಖಾಯಂ ಅಧಿಕಾರಿ/ನೌಕರರು ಹಾಗೂ ಗುತ್ತಿಗೆ/ಹೊರಗುತ್ತಿಗೆ/ನೇರಪಾವತಿ/ದಿನಗೂಲಿ ಕ್ಷೇಮಾಭಿವೃದ್ಧಿಯಡಿ 442 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಇರುವ ಸಿಬ್ಬಂದಿಗಳಿಂದಲೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲಾಗುತ್ತಿದೆ. |

**ಸಂಖ್ಯೆ: ನಅಇ 32 ಎಲ್‌ಸಿಕ್ಯೂ 2021**

(ಎನ್.ನಾಗರಾಜು ಎಂ.ಟಿ.ಬಿ.)
ಮಾನ್ಯ ಪೌರಾಡಳಿತ ಹಾಗೂ ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆ ಸಚಿವರು

ಅನುಬಂಧ

ಖಾಲಿ ಹುದ್ದೆ ಮಾಹಿತಿ ನಮೂನೆ

| ಕ್ರ. ಸಂ. | ಜಿಲ್ಲೆಯ ಹೆಸರು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | | | | ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ | | | | ಖಾಲಿ ಇರುವ ಹುದ್ದೆಗಳ ವಿವರ | | | | ಗುತ್ತಿಗೆ/ಹೊರಗುತ್ತಿಗೆ/ನೇರಪಾವತಿ / ಸಮಾನ ಕೆಲಸಕ್ಕೆ ಸಮಾನ ವೇತನ/ ದಿನಗೂಲಿ ಕ್ಷೇಮಾಭಿವೃದ್ಧಿ ನೌಕರರ ಸಂಖ್ಯೆ | | | |
|---|---|---|---|---|---|---|---|---|---|---|---|---|---|---|---|---|---|
| | | Gr A | Gr B | Gr C | Gr D | Gr A | Gr B | Gr C | Gr D | Gr A | Gr B | Gr C | Gr D | Gr A | Gr B | Gr C | Gr D |
| 1 | ನಗರಸಭೆ ಬೀದರ | 4 | 4 | 93 | 318 | 2 | 1 | 50 | 143 | 2 | 3 | 43 | 175 | 1 | 0 | 75 | 157 |
| 2 | ನಗರಸಭೆ ಬಸವಕಲ್ಯಾಣ | 3 | 4 | 67 | 173 | 2 | 3 | 22 | 39 | 1 | 1 | 45 | 134 | 1 | 0 | 11 | 119 |
| 3 | ಪುರಸಭೆ ಭಾಲ್ಕಿ | 0 | 3 | 37 | 85 | 0 | 2 | 12 | 31 | 0 | 1 | 25 | 54 | 0 | 0 | 12 | 42 |
| 4 | ಪುರಸಭೆ ಹುಮನಾಬಾದ | 0 | 3 | 37 | 94 | 0 | 2 | 11 | 28 | 0 | 1 | 26 | 66 | 0 | 0 | 3 | 55 |
| 5 | ಪುರಸಭೆ ಚಿಟ್ಟಗುಪ್ಪ | 0 | 3 | 37 | 62 | 0 | 3 | 9 | 22 | 0 | 0 | 28 | 40 | 0 | 0 | 4 | 33 |
| 6 | ಪುರಸಭೆ ಹಳ್ಳಿಖೇಡ ಬಿ | 0 | 3 | 37 | 57 | 0 | 1 | 11 | 10 | 0 | 2 | 26 | 47 | 0 | 0 | 0 | 19 |
| 7 | ಪಟ್ಟಣ ಪಂಚಾಯತ ಔರಾದ ಬಿ | 0 | 1 | 14 | 43 | 0 | 0 | 8 | 23 | 0 | 1 | 6 | 20 | 0 | 0 | 1 | 17 |
| | ಒಟ್ಟು | **7** | **21** | **322** | **832** | **4** | **12** | **123** | **296** | **3** | **9** | **199** | **536** | **2** | **0** | **106** | **442** |

Nkt...

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೀದರ